**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಫ್ರಾ.ಸಾ. 17

ಚಾ.ಸಾ. 23

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 18.03.2026**

| | |
|---|---|
| ಸಾಕ್ಷಿದಾರರ ಹೆಸರು | ಬಾಳಯ್ಯ |
| ತಂದೆಯ ಹೆಸರು | ಬಾಳಯ್ಯ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಎ ಎಸ್ ಐ |
| ವಾಸ | ಮಳವಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು ದಿನಾಂಕ 01.06.2016 ರಿಂದ 31.07.2023 ರವರೆಗೆ ಕೆಸ್ತೂರು ಪೊಲೀಸ್ ಠಾಣೆ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ದಿನಾಂಕ 11.03.2023 ರಂದು ನಾನು ಬೇರೆ ಪ್ರಕರಣದ ನಿಮಿತ್ತ ದೊಡ್ಡಅಂಕನಹಳ್ಳಿ ಗ್ರಾಮದಲ್ಲಿ ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಇದ್ದಾಗ ಬಾತ್ಮಿದಾರರಿಂದ ಫೋನ್ ಮೂಲಕ, ದುಂಡನಹಳ್ಳಿ ಗ್ರಾಮದಲ್ಲಿ ಗಲಾಟೆಯಾಗಿ ಒಬ್ಬರಿಗೆ ಏಟು ಆಗಿದೆ ಬನ್ನಿ ಎಂಬ ಮಾಹಿತಿ ಬಂತು. ನಂತರ ನಾನು ಹೆಚ್ ಸಿ

196 ಇಮ್ರಾನ್ ಉಲ್ಲಾಖಾನ್ ಚಾಸಾ.21, ಸಿಪಿಸಿ 139, ಸಿಪಿಸಿ 470 ಖಾಸಿಂ ಸಾಬ್ ಚಾಸಾ.19 ರವರನ್ನು ಕರೆದುಕೊಂಡು 12.00 ಗಂಟೆಗೆ ದುಂಡನಹಳ್ಳಿ ಗ್ರಾಮಕ್ಕೆ ಹೋದೆ. ದುಂಡನಹಳ್ಳಿ ಗ್ರಾಮದ ರಸ್ತೆಯಲ್ಲಿ ಒಬ್ಬ ಆಸಾಮಿ ಏಟಾಗಿ ಬಿದ್ದಿದ್ದರು. ಆತನನ್ನು ಉಪಚರಿಸಿ, ವಿಚಾರಿಸಿದಾಗ ಆತ ತನ್ನ ಹೆಸರು ನಿಖಿಲ್ (ಆರೋಪಿ–01) ಮಾಚನಹಳ್ಳಿ ಎಂದು ತಿಳಿದು ಬಂತು. ಆತನನ್ನು ನಮ್ಮ ಸಿಬ್ಬಂದಿ ಚಾಸಾ.19 ಮತ್ತು ಇನ್ನೊಬ್ಬ ಸಿಬ್ಬಂದಿ ಜೊತೆ ಮದ್ದೂರು ಸರ್ಕಾರಿ ಆಸ್ಪತ್ರೆಗೆ ಸಾಗಿಸಿದೆ. ಬಳಿಕ ನಾನು ಠಾಣೆಗೆ ಬಂದೆ. ಠಾಣೆಯಲ್ಲಿ ಮಧ್ಯಾಹ್ನ 2.00 ಗಂಟೆ ಸಮಯಕ್ಕೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ದುಂಡನಹಳ್ಳಿ ವಾಸಿ ಅಜಯ್.ಕೆ. ಚಾಸಾ.1 ರವರು ಠಾಣೆಗೆ ಹಾಜರು ಆಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ನಂ.30/2023 ನ್ನು ನೋಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ ಮತ್ತು ನಕಲುಗಳನ್ನು ಮೇಲಾಧಿಕಾರಿಗಳಿಗೆ ನೀಡಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.1 ದೂರಿನಲ್ಲಿ ತನ್ನ ತಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.26 ಎಂದು, ಸಾಕ್ಷಿಯ ಸಹಿಯನ್ನು ನಿಪಿ.26 ಎ ಎಂದು ಗುರುತಿಸಲಾಯಿತು.

.

.3. ನಂತರ ನಾನು ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಿಖಿಲ್ ರವರನ್ನು ಎಫ್ ಐ ಆರ್ ದಾಖಲು ಆದ ಬಳಿಕ, ಪಿಸಿ 139, ಸಿಪಿಸಿ 470 ಚಾಸಾ.19 ರವರ ಬೆಂಗಾವಲಿನಲ್ಲಿ ಮದ್ದೂರು ಸರ್ಕಾರಿ ಆಸ್ಪತ್ರೆಯಿಂದ 3.00 ಗಂಟೆಗೆ ಕೆಸ್ತೂರು ಪೊಲೀಸ್ ಠಾಣೆಗೆ ಕರೆಸಿಕೊಂಡೆನು. ಬಳಿಕ ನಾನು ನಿಖಿಲ್ ನನ್ನು ಕೃತ್ಯ ನಡೆದ ಬಗ್ಗೆ ಠಾಣೆಯಲ್ಲಿ ವಿಚಾರಿಸಿ, ಆತನ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡು. ಆತ ತನ್ನ ಹೇಳಿಕೆಯಲ್ಲಿ ಘಟನೆಯ ಬಗ್ಗೆ ಹೇಳಿದರು. ಆತನು ತನ್ನ ಹೇಳಿಕೆಯಲ್ಲಿ ತನಗೆ ಸಾರ್ವಜನಿಕರು ಹೊಡೆದುದರಿಂದ ನಾನು ಕೃತ್ಯ ಸ್ಥಳದಲ್ಲಿ ಬಿದ್ದಿದ್ದೆ ಎಂದು ಹೇಳಿದ. ಬಳಿಕ 1 ನೇ ಆರೋಪಿ ನಿಖಿಲ್ ನನ್ನು

ದಸ್ತಗಿರಿ ಮಾಡಿ ಆತನ ತಂದೆಗೆ ಆತನನ್ನು ದಸ್ತಗಿರಿ ಮಾಡಿದ ಬಗ್ಗೆ ಮಾಹಿತಿ ನೀಡಿದ್ದೇನೆ. ಬಳಿಕ ಆತನನ್ನು ಠಾಣಾ ಸುರಕ್ಷಾ ಬಂಧನದಲ್ಲಿರಿಸಿದ್ದೇನೆ.

.

.4. ಬಳಿಕ ಅದೇ ದಿನ ಸಂಜೆ 4.00 ಗಂಟೆಗೆ ದುಂಡನಹಳ್ಳಿ ವಾಸಿ 4 ನೇ ಆರೋಪಿ ವೆಂಕಟೇಶ್ ಸ್ವತಹ ಠಾಣೆಗೆ ಹಾಜರಾದ. ಅವನು ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ನಂ.31/2023 ನ್ನು ನೋಂದಾಯಿಸಿ, ಪ್ರಥಮ ವರ್ತಮಾನ ವರದಿ ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಮಾಡಿದ್ದೇನೆ. ಸದರಿ ದೂರಿನಲ್ಲಿ 4 ನೇ ಆರೋಪಿ, ಚಾಸಾ.1 ರಿಂದ ಚಾಸಾ.4 ರವರು ತನಗೆ ಹೊಡೆದರು ಎಂದು ಹೇಳಿದ್ದಾನೆ. ಪರಸ್ಪರ ಗಲಾಟೆಯಾಗಿ ಹಲ್ಲೆ ಮಾಡಿಕೊಂಡು ಗಾಯವಾಗಿರುವುದಾಗಿ 4 ನೇ ಆರೋಪಿ ದೂರು ನೀಡಿದ್ದಾನೆ. ಬಳಿಕ 4 ನೇ ಆರೋಪಿ ವೆಂಕಟೇಶನನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಸ್ತಗಿರಿ ಮಾಡಿ, ಆತನ ಸ್ವಇಚ್ಛಾ ಹೇಳಿಕೆ ದಾಖಲಿಸಿಕೊಂಡಿದ್ದೇನೆ. ಆತನನ್ನು ದಸ್ತಗಿರಿ ಮಾಡಿದ ಬಗ್ಗೆ ಆತನ ಹೆಂಡತಿ ಶೋಭಾರವರಿಗೆ ಮಾಹಿತಿ ನೀಡಿದ್ದೇನೆ.

.

.5. ಬಳಿಕ ಅದೇ ದಿನ ನಾನು ಕೃತ್ಯ ಸ್ಥಳ ದುಂಡನಹಳ್ಳಿ ಗ್ರಾಮದ ಪಿರ್ಯಾದಿಯವರ ಮನೆಯ ಬಳಿಗೆ ಸಂಜೆ 5.20 ಗಂಟೆಗೆ ಭೇಟಿ ನೀಡಿದೆ. ಅಲ್ಲಿ ಚಾಸಾ.1 ರವರು ಹಾಜರು ಇದ್ದು, ಆರೋಪಿತರು ಏಕಾಏಕಿ ನಮ್ಮ ಮನೆಯ ಒಳಗೆ ನುಗ್ಗಿ, ಮನೆಯೊಳಗಿನಿಂದ ನನ್ನನ್ನು ಮತ್ತು ಚಾಸಾ.2 ರಿಂದ ಚಾಸಾ.4 ರವರನ್ನು ಹೊರಗಡೆ ಎಳೆದುಕೊಂಡು ಬಂದು ಡ್ರ್ಯಾಗರ್ ನಿಂದ ಚುಚ್ಚಿ ರಕ್ತಗಾಯ ಮಾಡಿ, ಹಲ್ಲೆ ಮಾಡಿದ ಸ್ಥಳ ಎಂದು ಮನೆಯಿಂದ 70 ಅಡಿ ದೂರದ ರಸ್ತೆಯನ್ನು ತೋರಿಸಿದನು. ಅದೇ ಸ್ಥಳದಲ್ಲಿ ಚಾಸಾ.1 ರವರು ಅಲ್ಲಿ ಬಿದ್ದಿದ್ದ ಒಂದು ಡ್ರ್ಯಾಗರ್ ತೋರಿಸಿ, ಇದರಿಂದ ಆರೋಪಿಗಳು ಚುಚ್ಚಿ ಡ್ರ್ಯಾಗರ್ ಅಲ್ಲೇ ಬಿಸಾಡಿ ಹೋಗಿದ್ದನ್ನು, ನಾನು ಎತ್ತಿ ಇಟ್ಟಿದ್ದೆ ಎಂದು ಹೇಳಿದ. ಚಾಸಾ.1 ರವರು ಗಾಯಾಳುಗಳಾದ ಚಾಸಾ.2 ಮತ್ತು ಚಾಸಾ.3 ರವರು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳು ಎಂದು ಹೇಳಿ ರಕ್ತ ಅಂಟಿದ್ದ ಎರಡು T Shirt ಗಳನ್ನು ಹಾಜರುಪಡಿಸಿದರು. ಅವುಗಳನ್ನು ನಾನು ಅಮಾನತ್ತುಪಡಿಸಿಕೊಂಡೆ. ಅಲ್ಲಿ

ನಾನು ಸಾಕ್ಷಿಗಳಾದ ಚಾಸಾ.9 ಮತ್ತು ಚಾಸಾ.10 ರವರಿಗೆ ನೋಟಿಸು ನೀಡಿ, ಕರೆಸಿಕೊಂಡು ಅವರ ಸಮಕ್ಷಮ ನಿಪಿ.2 ರಂತೆ ಸಂಜೆ 5.20 ರಿಂದ 6.45 ಗಂಟೆವರೆಗೆ ಸ್ಥಳ ಪಂಚನಾಮೆಯನ್ನು ಮಾಡಿದ್ದೇನೆ. ಚಾಸಾ.1 ರವರು ಹಾಜರುಪಡಿಸಿದ ಡ್ರ್ಯಾಗರ್ ಮತ್ತು ಎರಡು T Shirt ಗಳನ್ನು ಪ್ರತ್ಯೇಕ ಬಿಳಿಯ ಚೀಲಗಳಲ್ಲಿ ಹಾಕಿ ಮೊಹರು ಮಾಡಿದ್ದೇನೆ. ಆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು.ಮಾ.1 ಡ್ರ್ಯಾಗರ್, ಮು.ಮಾ.2 ನೀಲಿ ಬಣ್ಣದ ಅರ್ಧ ತೋಳಿನ T Shirt, ಮು.ಮಾ.3 ಹಸಿರು ಬಣ್ಣದ ಅರ್ಧ ತೋಳಿನ T Shirt ಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮುದ್ದೆ ಮಾಲುಗಳನ್ನು ಮುಚ್ಚಿದ್ದ ಬಿಳಿಯ ಬಟ್ಟೆಯ ಚೀಲಕ್ಕೆ ಅಂಟಿಸಿದ ಚೀಟಿಗಳಲ್ಲಿ ನನ್ನ ಮತ್ತು ಸಾಕ್ಷಿಗಳ ಸಹಿ ಇದೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಮಹಜರು ಕಾಲಕ್ಕೆ ಫೊಟೋ ಕೂಡ ತೆಗೆದಿದ್ದೇನೆ. ಸಾಕ್ಷಿ ನಿಪಿ.3 ರಂತೆ ಗುರುತಿಸಿದ ಹತ್ತು ಛಾಯಾಚಿತ್ರಗಳನ್ನು ಮತ್ತೆ ನೋಡಿ ಗುರುತಿಸಿರುತ್ತಾರೆ. ನಾನು ಮಹಜರು ಸಾಕ್ಷಿಗಳಿಗೆ ನೀಡಿದ ನೋಟಿಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ.9 ನೋಟಿಸಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.9 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.2 ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2 ಡಿ ಎಂದು ಗುರುತಿಸಲಾಯಿತು.

.

.6. ನಂತರ ಠಾಣೆಗೆ ವಾಪಸ್ಸು ಬಂದು ನಿಪಿ.2 ಮಹಜರು ಕಾಲಕ್ಕೆ ಅಮಾನತ್ತುಪಡಿಸಿದ ವಸ್ತುಗಳನ್ನು ಠಾಣಾ ಪಿಎಫ್ ನಂ.29/2023 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ.

.

.7. ನಂತರ ಅದೇ ದಿನ 1 ನೇ ಆರೋಪಿ ನಿಖಿಲ್ ಮತ್ತು 4 ನೇ ವೆಂಕಟೇಶ್ ರವರ ಮೇಲೆ ಬಂಧನ ಅರ್ಜಿ ತಯಾರಿಸಿ ಇಬ್ಬರನ್ನೂ ಕೂಡ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಸಿಬ್ಬಂದಿಯ ಬೆಂಗಾವಲಿನಲ್ಲಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದೇನೆ. ನಂತರ ಮಾನ್ಯ ನ್ಯಾಯಾಲಯವು ಅವರಿಬ್ಬರನ್ನೂ ಕೂಡ ನ್ಯಾಯಾಂಗ ಬಂಧನಕ್ಕೆ ಕಳುಹಿಸಿರುತ್ತದೆ.

.

.8. ನಂತರ ಅದೇ ದಿನ ರಾತ್ರಿ 8.00 ಗಂಟೆ ಸಮಯಕ್ಕೆ ಪ್ರಕರಣದ ಗಾಯಾಳುಗಳಾದ ಚಾಸಾ.2, ಚಾಸಾ.3, ಚಾಸಾ.4 ಇವರನ್ನು ಪೊಲೀಸ್ ಠಾಣೆಗೆ ಕರೆಸಿಕೊಂಡು ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ಅವರ ಪೈಕಿ ಚಾಸಾ.2 ರವರು ನನ್ನ ಮುಂದೆ ನಿಪಿ.4 ರಂತೆ, ಚಾಸಾ.3 ರವರು ನನ್ನ ಮುಂದೆ ನಿಪಿ.5 ರಂತೆ, ಚಾಸಾ.4 ರವರು ನನ್ನ ಮುಂದೆ ನಿಪಿ.6 ರಂತೆ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳುವ ಕಾಲಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿ ಗುರುತಿಸಿದ ಸಹಿಗಳನ್ನು ಕ್ರಮವಾಗಿ ನಿಪಿ.4 ಎ, ನಿಪಿ.5 ಎ, ನಿಪಿ.6 ಎ ಎಂದು ಗುರುತಿಸಲಾಯಿತು.

.

.9. ನಂತರ ದಿನಾಂಕ 12.03.2023 ರಂದು ಈ ಪ್ರಕರಣದ ತನಿಖೆಯನ್ನು ಮುಂದುವರೆಸಿ ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ.5, ಚಾಸಾ.6, ಚಾಸಾ.7 ರವರನ್ನು ಠಾಣೆಗೆ ಕರೆಸಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ಅವರಲ್ಲಿ ಚಾಸಾ.5 ರವರು ನನ್ನ ಮುಂದೆ ನಿಪಿ.7 ರಂತೆ, ಚಾಸಾ.6 ರವರು ನನ್ನ ಮುಂದೆ ನಿಪಿ.8 ರಂತೆ, ಚಾಸಾ.7 ರವರು ನನ್ನ ಮುಂದೆ ನಿಪಿ.24 ರಂತೆ ಹೇಳಿಕೆ ನೀಡಿದ್ದಾರೆ. ಸಾಕ್ಷಿ ನಿಪಿ.7, ನಿಪಿ.8 ಮತ್ತು ನಿಪಿ.24 ರಲ್ಲಿ ಗುರುತಿಸಿದ ತನ್ನ ಸಹಿಯನ್ನು ಕ್ರಮವಾಗಿ ನಿಪಿ.7 ಎ, ನಿಪಿ.8 ಎ ಮತ್ತು ನಿಪಿ.24 ಎ ಎಂದು ಗುರುತಿಸಲಾಯಿತು. ಮತ್ತೆ ಅದೇ ದಿನ ಈ ಪ್ರಕರಣದ ಸಾಂದರ್ಭಿಕ ಸಾಕ್ಷಿದಾರರಾದ ಚಾಸಾ.8 ರವರ ಹೇಳಿಕೆಯನ್ನು ಅವರ ಊರಿನಲ್ಲಿಯೇ ದಾಖಲಿಸಿಕೊಂಡಿದ್ದೇನೆ.

.

.10. ದಿನಾಂಕ 15.03.2023 ರಂದು ಗಾಯಾಳುಗಳಾದ ಚಾಸಾ.2 ರಿಂದ ಚಾಸಾ.4 ರವರ ರಕ್ತದ ಗುಂಪನ್ನು ನಿರ್ಧರಿಸುವ ಬಾಬ್ತು ಅವರನ್ನು ಸಿಬ್ಬಂದಿ ಚಾಸಾ.19 ರವರ ಜೊತೆಗೆ ಮದ್ದೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ. ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳು ಅವರ ರಕ್ತ ಸಂಗ್ರಹಿಸಿ ಅವರ ರಕ್ತದ ಗುಂಪಿನ ಬಾಬ್ತು ವರದಿಯನ್ನು ಚಾಸಾ.19 ರವರ ಜೊತೆ ಮತ್ತೆ ಠಾಣೆಗೆ ಕಳುಹಿಸಿದ್ದಾರೆ. ಅದನ್ನು ಕಡತದಲ್ಲಿ ಅಳವಡಿಸಿದ್ದೇನೆ. ಅದು ನಿಪಿ.20 ರಿಂದ ನಿಪಿ.22.

.

.11. ದಿನಾಂಕ 21.03.2023 ರಂದು ಈ ಪ್ರಕರಣದ ತನಿಖೆ ಮುಂದುವರೆಸಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ವಸ್ತುಗಳಾದ ಮು.ಮಾ.1 ರಿಂದ ಮು.ಮಾ.3 ಅನ್ನು ವೈಜ್ಞಾನಿಕ ಪರೀಕ್ಷೆಗೆ ಸಿಬ್ಬಂದಿ ಚಾಸಾ.19 ರವರ ಮೂಲಕ ಆರ್ ಎಫ್ ಎಸ್ ಎಲ್ ಮೈಸೂರಿಗೆ ಕಳುಹಿಸಿಕೊಟ್ಟಿರುತ್ತೇನೆ.

.

.12. ದಿನಾಂಕ 06.04.2023 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೋಸ್ಕರ ಚಾಸಾ.24 ರವರಿಗೆ ವಹಿಸಿಕೊಟ್ಟಿರುತ್ತೇನೆ.

.

.13. ನನ್ನ ಮುಂದೆ ಹಾಜರಾದ ಆರೋಪಿ–1 ಮತ್ತು ಆರೋಪಿ–04 ರವರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರು ಇರುವ ಇನ್ನೊಂದು ಪ್ರಕರಣ ಎಸ್ ಸಿ 15/2025 ರ 1 ನೇ ಆರೋಪಿ ಮತ್ತು ಈ ಪ್ರಕರಣದ 4 ನೇ ಆರೋಪಿ ವೆಂಕಟೇಶ್ ನನ್ನು ನೋಡಿ ಗುರುತಿಸಿರುತ್ತಾರೆ.

.

**ಪಾಟೀ ಸವಾಲುಃ *2* ರಿಂದ *5* ನೇ ಆರೋಪಿತರ ಪರ ವಕೀಲರಿಂದಃ**

2 ರಿಂದ 5 ನೇ ಆರೋಪಿತರ ಪರ ವಕೀಲರು ಗೈರು ಹಾಜರು. ಆರೋಪಿಗಳಿಗೆ ಪಾಟೀ ಸವಾಲು ಮಾಡಲು ಹೇಳಿದಾಗ ಪಾಟೀ ಸವಾಲು ಮಾಡಿರುವುದಿಲ್ಲ. ಅದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.